ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Thursday, the 24th March 1981/Chaitra 3, 1903 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI K. H. RANGANATH) in the Chair].

STARRED QUESTIONS
(to which oral answers were given)

Sanction of Primary Health Unit near Siddarameswarapalya in Tiptur Taluk.

8 SRI V. L. SHIVAPPA (Tiptur).—Will the Minister for Health and Family Welfare be pleased to state.—

(a) whether is there any proposal before the Government to open a Primary Health Centre near Siddarameswarapalya, Tiptur Taluk;

(b) if so, the action taken by Government ?

SRI A. K. ABDUL SAMAD (Minister for Health and Family Welfare).—

(a) and (b) Sanction has been accorded to open a Primary Health Center in Siddarameswarapalya, Tiptur Taluk vide G.O. No. HFW 313 OGM 80, dated 29-12-1980.

ಶ್ರೀ ವಿ.ಎಲ್. ಶಿವಪ್ಪ.—ಸ್ವಾಮಿ ತಾವು ಸಿದ್ದರಾಮ ದೇವರ ಪಾಳ್ಯಕ್ಕೆ ಒಂದು ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಿದ್ದೀವೆಂದು ಹೇಳಿರುತ್ತೀರಿ. ಆಸ್ಪತ್ರೆಯು ಪ್ರಾರಂಭವಾಗಿ ಮೂರು ತಿಂಗಳಾಗಿರುತ್ತದೆ, ಅಲ್ಲಿಗೆ ಬೇಕಾದ ಔಷಧಿಗಳನ್ನು ಒದಗಿಸಿಲ್ಲ ಡಾಕ್ಟರನ್ನು ಪೋಸ್ಟ್ ಮಾಡಿಲ್ಲ, ಆಸ್ಪತ್ರೆಗೆ ಬೇಕಾದ ಸಲಕರಣೆಗಳನ್ನು ಒದಗಿಸಿಲ್ಲ, ಆದ್ದರಿಂದ ತಕ್ಷಣವೇ ಇವುಗಳನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ ಸ್ವಾಮಿ ?

†ಶ್ರೀ ಎ.ಕೆ. ಅಬ್ದುಲ್ ಸಮದ್.—ಪ್ರತಿಯೊಂದು ಘಟಕಕ್ಕೂ ಔಷಧಿ ಮತ್ತು ಪ್ಯಾಕೇಜ್‌ಗಾಗಿ ೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೀವೆ. ಡಾಕ್ಟರನ್ನು ಪೋಸ್ಟ್ ಮಾಡಿದ್ದೇನೆ. ಅಗತ್ಯವಾಗಿ ಏನಾದರೂ ಆಗದೆ ಇದ್ದರೆ ತಕ್ಷಣವೇ ತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

---

† Indicates that remarks or speeches have not been revised by the member concerned.